**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ,**

**ಶೋರಾಪುರ.**

**ಸಿ.ಸಿ. ನಂ.144/2019**

| | | |
|---|---|---|
| ಸಾಕ್ಷಿದಾರರ ಹೆಸರು | ಃ ರೇವಣೆಪ್ಪ | ಚಾಸಾ ಃ 03 |
| ತಂದೆ ಹೆಸರು | ಃ ಪೀರಪ್ಪ | ಪ್ರಾಸಾ ಃ 03 |
| ವಯಸ್ಸು | ಃ 45 ವರ್ಷ | |
| ವೃತ್ತಿ | ಃ ಒಕ್ಕಲುತನ | |
| ವಾಸ ಸ್ಥಳ | ಃ ಕೂಡ್ಲಗಿ | |

**ಸಾಕ್ಷಿಗೆ ಇಂದು ದಿನಾಂಕಃ 21.04.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ**

ಚಾಸಾ-1, 2, 4 ರಿಂದ 6 ರವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ಇರುತ್ತದೆ. ಈಗ 12 ವರ್ಷಗಳಿಂದ ಹಿಂದೆ ಘಟನಾ ಸ್ಥಳದಲ್ಲಿ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ಸದರಿ ದಾಖಲೆ ಪಂಚನಾಮೆ ಇದ್ದು, ಅದರಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸದರಿ ಪಂಚನಾಮೆ ಈಗಾಗಲೇ ನಿಪಿ-2 ಎಂದು ಗುರುತ್ತಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಮದ್ಯಾಹ್ನ 1 ರಿಂದ 2 ಗಂಟೆಯವರೆಗೆ ಮಾಡಿರುತ್ತಾರೆ. ಸದರಿ ಪಂಚನಾಮೆ ಕಾಲಕ್ಕೆ ಚಾಸಾ-1 ಮತ್ತು 3 ರವರು ಹಾಜರಿದ್ದರು. ಗುನ್ನಾ ಸ್ಥಳವನ್ನು ಚಾಸಾ-1 ರವರು ತೋರಿಸಿರುತ್ತಾರೆ. ಸದರಿ ಪಂಚನಾಮೆ ಕಾಲಕ್ಕೆ ಒಂದು ಕಲ್ಲನ್ನು ಜಪ್ತುಪಡಿಸಿಕೊಂಡಿರುತ್ತಾರೆ. ಸದರಿ ಕಲ್ಲನ್ನು ಗುರುತಿಸುತ್ತೇನೆ. ಅದು ಈಗಾಗಲೇ ಎಂ.ಓ 1 ಎಂದು ಗುರುತಾಗಿರುತ್ತದೆ.

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎಸ್.ಎಂ.ಪಿ ವಕೀಲರಿಂದಃ**

ಆರೋಪಿತರಿಗೂ ಮತ್ತು ಚಾಸಾ-1 ರವರಿಗೂ ಮೊದಲಿನಿಂದಲೂ ಹೊಲ ಮನೆಗೆ ಸಂಬಂಧಿಸಿದಂತೆ ಜಗಳ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆ ದಿನ ನನ್ನನ್ನು ಕರೆಯಲು ಯಾರೂ ಬಂದಿರುವುದಿಲ್ಲ. ಪಂಚನಾಮೆಯಲ್ಲಿ ಏನು ಬರೆದಿರುತ್ತದೆ ಎಂದರೆ ನನಗೆ ಗೊತ್ತಿರುತ್ತದೆ. ಚಾಸಾ-1 ರವರು ಜಾಗೆಯನ್ನು

ತೋರಿಸಿರುತ್ತಾನೆ. ಚಾಸಾ-1 ರವರು ನನ್ನನ್ನು ಕರೆಯಲು ಬಂದಿದ್ದರು. ಚಾಸಾ-1 ನನಗೆ ಪಂಚರೆಂದು ಸಹಿ ಮಾಡಲು ನನ್ನನ್ನು ಕರೆದಿರುತ್ತಾರೆ. ಆತ ಕರೆಯಲು ಬಂದಾಗ ನಾನು ಮಠದ ಹತ್ತಿರ ಇದ್ದೆನು. ನಾನು ಬಂದಾಗ ಚಾಸಾ-2 ಎಲ್ಲಿ ಇದ್ದನು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಮತ್ತು ಅದನ್ನು ಓದಿ ಹೇಳಿರುವುದಿಲ್ಲ. ಜಗಳ ಯಾವುಕ್ಕೆ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಮುದ್ದೇಮಾಲನ್ನು ಯಾರು ತೋರಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಜಗಳದ ಬಗ್ಗೆ ಯಾವುದೇ ಮಾಹಿತಿ ಇಲ್ಲ, ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** ಃ ಇಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.